# ಆಕಾಶದಿಂದ ಬಂದ ಸಂದೇಶ



✍ ಸುನಯನ ವಾಲ್ಟರ್ಸ್

ಮೆಕ್ಸಿಕೋ ದೇಶದಲ್ಲಿ ಅದೊಂದು ಬಿರುಬಿಸಿಲಿನ ಮಧ್ಯಾಹ್ನದ ಸಮಯ. ಜನಸಂಚಾರವಿಲ್ಲದೆ ನಿದ್ರಿಸಿದಂತಿದ್ದ ಹಳ್ಳಿಯಲ್ಲಿ ಒಂದು ವಿಮಾನವು ಕಳೆಮಟ್ಟದಲ್ಲಿ ಸಂಚರಿಸುವ ದೊಡ್ಡ ಶಬ್ಧ ಕೇಳಿ ಬಂತು. ಆ ಶಬ್ದದಿಂದಾಗಿ ಭಯವೆನಿಸಿದರೂ ಕುತೂಹಲದಿಂದ 9 ವರ್ಷದ ಪಂಚಿಟೋ ಹೊರಗೆ ಧಾವಿಸಿದ. ಒಮ್ಮೆಲೇ ವಿಮಾನದಿಂದ ಒಂದು ಮೋಡ ಹೊರಗೆ ಬಂದಂತೆನಿಸಿತು. ಆ ಕೂಡಲೇ ಆ ಬಿಳಿಯ ಮೋಡವು ಸಾವಿರಾರು ತುಣುಕುಗಳಾಗಿ, ಗಾಳಿಯ ಮೂಲಕ ಆ ಹಳ್ಳಿಯ ಮೇಲೆ ಚದುರಿಸಲ್ಪಟ್ಟಿತು. ವಿಮಾನ ದಾಟಿ ಹೋಯಿತು. ಹಳ್ಳಿಯ ಮೇರೆಯಲ್ಲಿದ್ದ ಹಣ್ಣಿನ ತೋಟದ ಕಡೆಗೆ ಇಳಿದು ಬರುತ್ತಿರುವ ಆ ಚೀಟಿಗಳನ್ನು ಎಲ್ಲರೂ ಕಂಡರು. ಭಯ ಮರೆತ ಪಂಚಿಟೋ ಕೇಕೆ ಹಾಕುತ್ತಾ ಆ ಕಡೆಗೆ ಧಾವಿಸಿದ ಎಲ್ಲಾ ಮಕ್ಕಳೊಂದಿಗೆ ತಾನೂ ಸೇರಿಕೊಂಡ. ತಮ್ಮಿಂದಾದಷ್ಟು ಚೀಟಿಗಳನ್ನು ಎಲ್ಲ ಮಕ್ಕಳೂ ನಗೆಯುತ್ತಾ; ಓಡುತ್ತಾ ಸಂಗ್ರಹಿಸಿದರು.

ಪಂಚಿಟೋನ ತಂದೆ ತಾಯಿ ಮೃತಪಟ್ಟಿದ್ದರು. ಅಜ್ಜಿಯೊಂದಿಗಿದ್ದ ಅವನು ಶಾಲೆಯ ಮುಖ ನೋಡಿರಲಿಲ್ಲ. ಚೀಟಿಯ ಮೇಲಿದ್ದ ಚಿತ್ರ ಆಕರ್ಷಕವಾಗಿತ್ತು. ಆದರೆ ಅಲ್ಲಿ ಏನು ಬರೆದಿದೆಯೋ ಎಂಬ ಕುತೂಹಲ ಆ ಬಾಲಕನನ್ನು ಕಾಡಿತು. ತನಗೆ ಸಹಾಯ ಮಾಡುವವರು ಯಾರೆಂದು ಅವನಿಗೆ ತಿಳಿದಿತ್ತು.

ಅಜ್ಜಿಯು ಅವನ ಬಳಿ ಕುಳಿತು ಅದರಲ್ಲಿದ್ದ ಮನಮುಟ್ಟುವ ಕಥೆಯನ್ನು ಓದಿದಳು. ಚುಟುಕಾಗಿ ಬರೆದಿದ್ದ ಯೇಸುಸ್ವಾಮಿಯ ಪರಿಚಯ, ಆತನು ಕ್ರೂಜೆಯಲ್ಲಿ ನಮಗಾಗಿ ಬಲಿಯಾದದ್ದು ಹಾಗೂ ಸ್ವರ್ಗ ನರಕಗಳ ಕುರಿತು ಅದರಲ್ಲಿ ಬರೆದಿತ್ತು. ಆ ಹಳ್ಳಿಯಲ್ಲಿ ವಿಸ್ತೃತವಾಗಿದ ಧಾರ್ಮಿಕ ಮೂಢನಂಬಿಕೆಗಳು, ಮಾಟಮಂತ್ರಗಳ ಆಚರಣೆಗೆ ವಿರುದ್ಧವಾಗಿದ್ದ ಹೊಸ ವಿಷಯ !

ಹಳ್ಳಿಯ ಮುಖಂಡರಲ್ಲಿ ಹಲವರು ಇದನ್ನು ಓದಿ ಬಹಳ ಕೋಪಗೊಂಡರು. "ಎಲ್ಲರೂ ತಮಗೆ ಸಿಕ್ಕಿದ ಎಲ್ಲಾ ಹಾಳೆಗಳನ್ನು ಕೂಡಲೇ ಹಳ್ಳಿಯ ಚೌಕಕ್ಕೆ ತರಬೇಕು. ಅಲ್ಲಿ ಸಾಮೂಹಿಕವಾಗಿ ಅದನ್ನು ಸುಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಸುಳ್ಳಿನ ಒಂದು ಚೀಟಿಯೂ ಉಳಿಯಬಾರದು" – ಎಂದು ತಿಳಿಸಲಾಯಿತು.

ಹಿರಿಯರು ಭಯಪಟ್ಟು ತಮ್ಮಲ್ಲಿದ್ದ ಮತ್ತು ತಮ್ಮ ಮಕ್ಕಳ ಕೈಯಲ್ಲಿದ್ದ ಚೀಟಿಗಳನ್ನು ತಂದು ಒಪ್ಪಿಸಿದರು. ಆದರೆ ಪಂಚಿಟೋನ ಮನಸ್ಸು ಇದಕ್ಕೊಪ್ಪಲಿಲ್ಲ. ಅದರಲ್ಲಿದ್ದ ಕಥೆ ಮತ್ತು ಸತ್ಯವೇದದ ವಚನಗಳನ್ನು ಇನ್ನೊಮ್ಮೆ ತಿಳಿಯಬೇಕೆನಿಸಿತು.

ತನ್ನ ಅಂಗಿಯೊಳಗೆ ಅವಿತಿಟ್ಟುಕೊಂಡಿದ್ದ ಆ ಹಾಳೆಯೊಂದಿಗೆ ಓಡುತ್ತಾ ತನ್ನ ಮನೆ ತಲುಪಿದ ಆತನು ತನ್ನ ಹುಲ್ಲು ಚಾಪೆಯ ಅಡಿಗೆ ಆ ತನ್ನ ನಿಧಿಯನ್ನು ತೂರಿಸಿ ಅಡಗಿಸಿಟ್ಟನು. ಅಷ್ಟೇ

ವೇಗವಾಗಿ ಹಿಂದೆ ಓಡಿ, ಮಕ್ಕಳ ಕೇಕೆಯೊಂದಿಗೆ ಮೇಲೇರಿದ್ದ ಅಗ್ನಿ ಜ್ವಾಲೆಯನ್ನು ನೋಡುತ್ತಾ ನಿಂತನು. ಹೊಗೆ, ಬೂದಿಗಳು ಮೇಲೇರಿದಂತೆ ಆ ಹಾಳೆಗಳನ್ನು ಉದುರಿಸಿದ ವಿಮಾನದಲ್ಲಿದ್ದ ಜನರ ಬಗ್ಗೆ ಕೆಲವರು ಕೆಟ್ಟ ಮಾತುಗಳನ್ನಾಡಿದರು.

ಕುತೂಹಲಭರಿತನಾಗಿದ್ದ ಪಂಚಿಟೋ ಅಡಗಿಸಿದ್ದ ಆ ಹಾಳೆಯನ್ನು ಹೊರತೆಗೆದು ತಾನು ನಂಬಿದ್ದ ಇತರರ ಮೂಲಕ ಗುಟ್ಟಾಗಿ ಬಾರಿ ಬಾರಿ ಅದನ್ನು ಓದಿಸಿ ಕೇಳಿದನು. ಈ ಮಾತುಗಳಲ್ಲಿ ತಪ್ಪೇನಿದೆ? – ಇದು ಅವನ ಯೋಚನೆಯಾಗಿತ್ತು.

**"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು"**. (ಯೋಹಾನ 3 : 16)

ಆ ಚೀಟಿಯಲ್ಲಿ ಇದು ಹೇಗಾಯಿತೆಂಬ ವಿವರಣೆ ಇತ್ತು. ಇದು ಸತ್ಯವಲ್ಲವೇ? ಇದರಲ್ಲಿ ತಪ್ಪೇನಿದೆ? – ಈ ವಿಷಯ ಆ ಹುಡುಗನನ್ನು ಬಹಳವಾಗಿ ಕಾಡಿತು. ಪಾಪದ ಕುರಿತಾಗಿ ಅದರಲ್ಲಿ ವಿವರಣೆ ಇತ್ತು.

- ❖ ತಾನು ಹಲವು ಬಾರಿ ಇತರರಿಗೆ ಕೆಟ್ಟ ಮಾತುಗಳನ್ನಾಡಿದ್ದಕ್ಕೆ ಅವನಿಗೆ ಪಶ್ಚಾತ್ತಾಪವಾಯಿತು.
- ❖ ತನಗೆ ಆಸೆಯಾದಾಗ ಇತರರ ಸಣ್ಣಪುಟ್ಟ ವಸ್ತುಗಳನ್ನು ಕದ್ದದ್ದಕ್ಕೆ ಅವನಿಗೆ ಪಶ್ಚಾತ್ತಾಪವಾಯಿತು.
- ❖ ತನ್ನ ಅವಿಧೇಯತೆಯ ವರ್ತನೆಗೆ ಅವನಿಗೆ ಪಶ್ಚಾತ್ತಾಪವಾಯಿತು.
- ❖ ತನ್ನ ತಪ್ಪಾದ ಯೋಜನೆಗಳಿಗಾಗಿ ಅವನಿಗೆ ಪಶ್ಚಾತ್ತಾಪವಾಯಿತು.

ಇದೊಂದು ಕೆಟ್ಟ ಸುದ್ದಿಯೇ. ಆದರೆ ಅದನ್ನು ಸರಿಪಡಿಸಲು ದೇವರು ಏನೋ ಮಾಡಿದನಲ್ಲ! ಆತನನ್ನು ನಂಬುವವರು ನಾಶವಾಗದೆ ನಿತ್ಯ ಜೀವವನ್ನು ಪಡೆಯುವ ಮಾತು ಆಹ್ಲಾದಕರವಾಗಿತ್ತು.

ಪಂಚಿಟೋನ ಜೀವನ ಮುಂದೆ ಸಾಗಿತು. 50 ವರ್ಷಗಳವರೆಗೂ ಆ ಮಾತುಗಳು ಬಾರಿ ಬಾರಿ ನೆನಪಾಗುತ್ತಿದ್ದವು. ಆ ಹಾಳೆಯು ಕೊಳೆಯಾಗಿ, ಜೀರ್ಣವಾಗಿ ನಾಶವಾಯಿತು. ಕಳೆದೂ ಹೋಯಿತು. 1991ನೇ ಇಸವಿಯಲ್ಲಿ ಆ ಹಳ್ಳಿಯು ಒಂದು ಚಿಕ್ಕ ಪಟ್ಟಣದ ರೂಪ ತಾಳಿತ್ತು. ಮುಖ್ಯ ರಸ್ತೆಯಲ್ಲಿ ಆತನು ನಡೆಯುತ್ತಿದ್ದಾಗ ಒಬ್ಬ ವ್ಯಕ್ತಿಯು ವೇದವಾಕ್ಯದ ಚಿಕ್ಕ ಪುಸ್ತಕವನ್ನು ಹಂಚುತ್ತಿದ್ದುದನ್ನು ಕಂಡನು. ಮರುದಿನ ಆತನಲ್ಲಿಗೆ ಹೋಗಿ ವಿಚಾರಿಸಿದಾಗ ಆ ವ್ಯಕ್ತಿಯು ಸತ್ಯವೇದದ ಕುರಿತಾಗಿ ಬಹಳ ಮಾತುಗಳನ್ನು ತಿಳಿಸಿ ಹೇಳಿದನು. ಈ ಹಿಂದೆ ಯಾರು ಸತ್ಯವೇದವನ್ನು ಓದಿ ಹೇಳಿದುದನ್ನು ಪಂಚಿಟೋ ಕೇಳಿರಲಿಲ್ಲ. ಆದರೆ ಆ ಸಂದೇಶವು ಆತನಿಗೆ ಪರಿಚಿತವೆನಿಸಿತು.

"ನಾವೆಲ್ಲರೂ ಪಾಪ ಮಾಡಿದ್ದೇವೆಂದು ನಿನಗೆ ತಿಳಿದಿದೆಯೋ?"

ಆ ಸುವಾರ್ತಕನು ಕೇಳಿದನು. ಪಂಚಿಟೋಗೆ ಇದು ತಿಳಿದಿತ್ತು. ಆಕಾಶದಿಂದ ಬಿದ್ದ ಚೀಟಿಯಲ್ಲಿ ಇದು ಬರೆದಿತ್ತು. ಸುವಾರ್ತಕನು ಯೋಹಾನ 5 : 24ರಿಂದ ಓದಿ ಹೇಳಿದನು. *"ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನು ನಿತ್ಯಜೀವವನ್ನು ಹೊಂದಿದ್ದಾನೆ. ಅವನು ತೀರ್ಪಿಗೆ ಗುರಿಯಾಗುವುದಿಲ್ಲ. ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ"*. ಪಂಚಿಟೋನ ಹೃದಯದಲ್ಲಿ ಹಿಡಿದಿರಲಾರದಷ್ಟು ಸಂತೋಷ ತುಂಬಿತು. ತಾನು ಆ ಚಿಕ್ಕ ಹಾಳೆಯಲ್ಲಿ ಬಾಲಕನಾಗಿದ್ದಾಗ ಓದಿದ್ದು ನಿಜ! ಅವು ಸತ್ಯವೇದದ ವಾಕ್ಯಗಳು.

ಪಂಚಿಟೋ ಯೋಚಿಸಿದ – "ಈ ಮಾತು ಸತ್ಯ, ನಾನು ಪಾಪಿ ದೇವರು ತನ್ನ ಮಗನನ್ನು ನನಗಾಗಿ ಕಳುಹಿಸಿದ್ದು. ನಾನು ರಕ್ಷಣೆ ಹೊಂದಿ, ಪಾಪಕ್ಷಮೆ

ಪಡೆದು ಈ ಕೂಡಲೇ ಈ ವಾಕ್ಯವನ್ನು ನಂಬಬೇಕು ಮತ್ತು ನನ್ನನ್ನು ರಕ್ಷಿಸಿದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಬೇಕು".

ಆತನೊಬ್ಬನೇ ಅಲ್ಲ, ಆತನ ಹೆಂಡತಿ, 4 ಮಕ್ಕಳು ಕೂಡಾ ವೇದವಾಕ್ಯವನ್ನು ಆಲಿಸಿ ರಕ್ಷಣೆ ಹೊಂದಿದರು. ಸತ್ಯವೇದವನ್ನು ಓದಿ ತಿಳಿದುಕೊಳ್ಳಬೇಕೆಂಬ ಕಾತುರತೆಯಿಂದ, ಪಂಚಿಟೋ ಕಷ್ಟಪಟ್ಟು ಓದು ಬರಹ ಕಲಿತುಕೊಂಡ.

ನಮಗೆ ವೇದವಾಕ್ಯದ ಸಂದೇಶವು ಆಕಾಶದಿಂದ ಬರಬೇಕಾಗಿಲ್ಲ. ನಮ್ಮ ಕೈಯಲ್ಲೇ ಸತ್ಯವೇದವಿದೆ. ಅದೇ ಸಂದೇಶ ಕ್ರಿಸ್ತನು ನಮ್ಮ ಪಾಪಗಳನ್ನು ತನ್ನದೆಂಬಂತೆ ತಿಳಿದು ಶ್ರಮೆ ಪಟ್ಟನು. ಇದು ನಮಗೆ ಆಕಾಶದಿಂದ ಬಂದ ಸಂದೇಶ. ನಮ್ಮ ಹೃದಯವನ್ನು ತುಂಬಬೇಕಾದ ಸಂದೇಶ. ●